ಆದಾಗ್ಯೂ ದೈಹಿಕ ಶಿಕ್ಷಣ ಶಿಕ್ಷಕರನ್ನು "ಸಹ ಶಿಕ್ಷಕರು (ದೈಹಿಕ ಶಿಕ್ಷಣ)" ಎಂದು ಪದನಾಮೀಕರಿಸಿ ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗೆ ಪ್ರೌಢ ಶಾಲಾ ಸಹ ಶಿಕ್ಷಕರ ಮತ್ತು ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–1 ವೃಂದದಿಂದ 9:1ರ ಅನುಪಾತದಲ್ಲಿ ಮತ್ತು ಹಿರಿಯ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಮತ್ತು ಹಿರಿಯ ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–2 ವೃಂದದಿಂದ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗಳಿಗೆ 25:1 ಅನುಪಾತದಲ್ಲಿ ಬಡ್ತಿ ನೀಡುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ತಿದ್ದುಪಡಿಯು ಪ್ರಸ್ತಾವನೆಯಲ್ಲಿ ಒಳಗೊಂಡಿರುತ್ತದೆ. ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಬಸವ ವಸತಿ ಯೋಜನೆ

155(136) **ಶ್ರೀ ಮೋಹಿಯುದ್ದಿನ್ ಬಾವಾ ಬಿ.ಎ. (ಮಂಗಳೂರು ನಗರ ಉತ್ತರ):**– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 2011–12, 2012–13 ಹಾಗೂ 2013–14ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಮಂಗಳೂರು ತಾಲ್ಲೂಕಿನಲ್ಲಿ ಆಯ್ಕೆಯಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; ಫಲಾನುಭವಿಗಳಿಗೆ ನೀಡಿರುವ ಮೊತ್ತ ಎಷ್ಟು;

(ಆ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಿ ಪೂರ್ಣಗೊಳಿಸಲಾಗಿದೆ; ಫಲಾನುಭವಿಗಳಿಗೆ ಪೂರ್ಣ ಅನುದಾನ ಬಿಡುಗಡೆ ಮಾಡಲಾಗಿದೆಯೇ;

(ಇ) ಇಲ್ಲದಿದ್ದಲ್ಲಿ, ಅನುದಾನ ಬಿಡುಗಡೆಗೊಳಿಸದಿರಲು ಕಾರಣವೇನು ಅನುದಾನ ಬಿಡುಗಡೆಗೊಳಿಸಲು ಸರ್ಕಾರ ಕೈಗೊಂಡಿರು ಕ್ರಮಗಳೇನು? (ವಿವರ ನೀಡುವುದು)

ಡಾ॥ ಎಂ.ಎಚ್. ಅಂಬರೀಷ್ (ಮಾನ್ಯ ವಸತಿ ಸಚಿವರು):–

(ಅ) ಮಂಗಳೂರು ತಾಲ್ಲೂಕಿಗೆ ಬಸವ ವಸತಿ ಯೋಜನೆ 2010–11ನೇ ಶ್ರೇಣಿಯಡಿ 3318 ಫಲಾನುಭವಿಗಳನ್ನು ಮತ್ತು 2013–14ನೇ ಶ್ರೇಣಿಯಡಿ 558 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, ಈವರೆಗೆ ಜಿ.ಪಿ.ಎಸ್. ಪ್ರಗತಿಯ ಆಧಾರದ ಮೇಲೆ ರೂ. 769.89 ಲಕ್ಷಗಳ ಅನುದಾನವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ಬಿಡುಗಡೆ ಮಾಡಲಾಗಿದೆ.

ಬಸವ ವಸತಿ ಯೋಜನೆಯಡಿಯಲಿ 2011–12 ಮತ್ತು 2012–13 ಶ್ರೇಣಿಯಡಿ ಗುರಿ ನಿಗದಿಪಡಿಸಿರುವುದಿಲ್ಲ.

(ಆ) ಮಂಗಳೂರು ತಾಲ್ಲೂಕಿನಲ್ಲಿ ಕಳೆದ 3 ಆರ್ಥಿಕ ವರ್ಷಗಳಲ್ಲಿ ಬಸವ ವಸತಿ ಯೋಜನೆಯಡಿಯಲ್ಲಿ 999 ಮನೆಗಳು ಪೂರ್ಣಗೊಂಡಿದ್ದು, ಈ ಮನೆಗಳ ಪೈಕಿ 704 ಅರ್ಹ ಫಲಾನುಭವಿಗಳ ಖಾತೆಗೆ ನೇರವಾಗಿ ಅನುದಾನ ರೂ. 373.725 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ.

(ಇ) ಈ ಯೋಜನೆಯಡಿ ಸರ್ಕಾರವು ಜಿ.ಪಿ.ಎಸ್. ಆಧಾರಿತ ಪ್ರಗತಿಗೆ ಅನುಗುಣವಾಗಿ ಅರ್ಹ ಫಲಾನುಭವಿಗಳ ಖಾತೆಗೆ ನೇರವಾಗಿ ಅನುದಾನ ಬಿಡುಗಡೆಗೆ ಮಾಡುತ್ತಿದ್ದು, 295 ಫಲಾನುಭವಿಗಳನ್ನು ಈ ಕೆಳಕಂಡ ಕಾರಣಗಳಿಂದ ಅನರ್ಹರೆಂದು ಪರಿಗಣಿಸಿ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

1. ಮನೆ ವಿಸ್ತರಣೆ (House Extension)
2. ಹಳೇ ಮನೆ ಅಥವಾ ಹಂತವಾರು ಛಾಯಚಿತ್ರಗಳ ಅವಶ್ಯಕತೆ (Old House Required stage wise photos)
3. ನಿಗದಿಪಡಿಸಿದ ಘಟಕವೆಚ್ಚ ಮೀರಿ ನಿರ್ಮಿಸಿದ ಮನೆ (Building)
4. ಭೌತಿಕ ಪ್ರಗತಿಗೆ ಅನುಗುಣವಾಗಿ ಜಿ.ಪಿ.ಎಸ್. ಛಾಯಚಿತ್ರ ಅಳವಡಿಸದೇ ಇರುವುದು.

ಸದರಿ ಫಲಾನುಭವಿಗಳು ವಾಸ್ತವಿಕವಾಗಿ ಅರ್ಹರಿರುವುದು ಕಂಡುಬಂದಲ್ಲಿ ಕಾರ್ಯನಿರ್ವಹಣಾಧಿಕಾರಿಗಳು ಪರಿಶೀಲಿಸಿ ವರದಿ ನೀಡಲು ತಿಳಿಸಲಾಗಿದೆ.

ಅಂಗನವಾಡಿ ಕೇಂದ್ರಗಳು

156(137) ಶ್ರೀ ಮೋಹಿಯುದ್ದೀನ್ ಬಾವಾ ಬಿ.ಎ. (ಮಂಗಳೂರು ನಗರ ಉತ್ತರ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ, ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–